# ಬೆಂಗಳೂರು ಮಹಾನಗರ ಪಾಲಿಕೆ
# (ಪಶುಪಾಲನಾ ಇಲಾಖೆ)
# 2018–19 ನೇ ಸಾಲಿನ ವಾರ್ಷಿಕ ವರದಿ

**ಇಲಾಖೆಯ ಕರ್ತವ್ಯಗಳು:-**

1. ಬೀದಿನಾಯಿಗಳ ಸಂತಾನಹರಣ ಚಿಕಿತ್ಸೆ ಹಾಗೂ ಹುಚ್ಚುನಾಯಿ ರೋಗದ ವಿರುದ್ಧ ಲಸಿಕಾ ಕಾರ್ಯ.
2. ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಪರವಾನಗಿ ನೀಡುವುದು.
3. ಸಾಕುನಾಯಿಗಳಿಗೆ ಪರವಾನಗಿ ನೀಡುವುದು.
4. ಬೀಡಾಡಿ ದನಗಳ/ ಹಂದಿಗಳ ವಿರುದ್ಧ ಕಾರ್ಯಾಚರಣೆ.
5. ಖಾಸಗಿ ಪಶುಚಿಕಿತ್ಸಾಲಯಗಳ ಪರವಾನಗಿ.
6. ಪ್ರಾಣಿ ವಧಾಗಾರಗಳ ಉಸ್ತುವಾರಿ.
7. ಅನಧಿಕೃತ ಮಾಂಸದ ಅಂಗಡಿಗಳ ವಿರುದ್ಧ ಕ್ರಮ.

- **ಪಶುಪಾಲನಾ ಇಲಾಖೆ 2012 ರಲ್ಲಿ ಕೈಗೊಂಡಿರುವ 19ನೇ ಜಾನುವಾರು ಗಣತಿಯಂತೆ ನಾಯಿಗಳ ಸಂಖ್ಯೆ ವಿವರಗಳು:-**

| | |
|---|---|
| ಬೀದಿನಾಯಿಗಳು | 185454 |
| ಸಾಕುನಾಯಿಗಳು | 105055 |
| ಒಟ್ಟು | 290509 |

- **ಎ.ಬಿ.ಸಿ ಡಾಗ್ಸ್‌ರೂಲ್ಸ್ 2001:**

1. ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡದ ಬೀದಿನಾಯಿಗಳನ್ನು ಮಾತ್ರ ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಲು ಅವಕಾಶ.
2. ಸಂತಾನಹರಣ ಶಸ್ತ್ರಚಿಕಿತ್ಸೆ ಒಳಪಡಿಸಿ ಹುಚ್ಚುನಾಯಿ ರೋಗದ ವಿರುದ್ಧ ಲಸಿಕೆ ಹಾಕಿ, ಒಳ ಮತ್ತು ಹೊರ ಪರೋಪಜೀವಿಗಳ ವಿರುದ್ಧ ಔಷಧಿ ನೀಡಿ ನಂತರ ಬೀದಿನಾಯಿಗಳನ್ನು ಎಲ್ಲಿ ಹಿಡಿಯಲಾಯಿತೊ ಅಲ್ಲಿಯೇ ಪುನಃ ಬಿಡಲಾಗುತ್ತಿದೆ.
3. ತೀವ್ರತರವಾದ ಖಾಯಿಲೆಯಿಂದ ನರಳುತ್ತಿರುವ ಹಾಗೂ ಮಾರಣಾಂತಿಕವಾಗಿ ಗಾಯಗೊಂಡ ಬೀದಿ ನಾಯಿಗಳನ್ನು ಮಾತ್ರ ದಯಾಮರಣಕ್ಕೆ ಒಳಪಡಿಸಲು ಅವಕಾಶ.
4. ಹುಚ್ಚುರೋಗದಿಂದ ನರಳುತ್ತಿರುವುದಾಗಿ ಶಂಕಿಸಿದ ಬೀದಿನಾಯಿಗಳನ್ನು ಹಿಡಿದು ತಂದು ಪ್ರತ್ಯೇಕವಾದ ನಾಯಿಗೂಡಿನಲ್ಲಿರಿಸಿ 10 ದಿನಗಳವರೆಗೆ ನಿಗಾವಹಿಸಲು ಅವಕಾಶ.

- ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿದ ವಿವರ:-

| ಕ್ರ.ಸಂ | ಅವಧಿ | ಶಸ್ತ್ರ ಚಿಕಿತ್ಸೆ ಒಳಪಡಿಸಲಾದ ನಾಯಿಗಳು |
|---|---|---|
| 1 | 2000-01 | 9957 |
| 2 | 2001-02 | 16619 |
| 3 | 2002-03 | 17319 |
| 4 | 2003-04 | 30582 |
| 5 | 2004-05 | 32907 |
| 6 | 2005-06 | 35168 |
| 7 | 2006-07 | 29017 |
| 8 | 2007-08 | 52467 |
| 9 | 2008-09 | 42695 |
| 10 | 2009-10 | 29349 |
| 11 | 2010-11 | 69141 |
| 12 | 2011-12 | 93447 |
| 13. | 2012-13 | 61667 |
| 14. | 2013-14 | 52524 |
| 15. | 2014-15 | 30410 |
| 16. | 2015-16 | 35261 |
| 17. | 2016-17 | 8662 |
| 18. | 2017-18 | 35266 |
| 19 | 2018-19 | 46151 |

* ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ನಾಯಿ ಕಡಿತದ ವಿವರ:-

| ವರ್ಷ | ಒಟ್ಟು |
|---|---|
| 2009-10 | 20555 |
| 2010-11 | 24120 |
| 2011-12 | 22177 |
| 2012-13 | 22913 |
| 2013-14 | 17933 |
| 2014-15 | 19488 |
| 2015-16 | 17178 |
| 2016-17 | 16979 |
| 2017-18 | 12608 |
| 2018-19 | 10086 |

- <u>ಕಾರ್ಯ ನಿರ್ವಹಿಸುತ್ತಿರುವ ಎ.ಡಬ್ಲ್ಯೂ.ಓಗಳು ಮತ್ತು ಅವರಿಗೆ ನೀಡಲಾಗಿರುವ ವಲಯಗಳ ವಿವರ:</u>

| ಕ್ರ.ಸಂ. | ಸಂಸ್ಥೆಯ ಹೆಸರು | ವಲಯ |
|---|---|---|
| 1 | ಎ.ಆರ್.ಎಫ್. ಸಂಸ್ಥೆ / ಸುಷ್ಮಾ ಎಂಟರ್ ಪ್ರೈಸಸ್ | ಬೆಂಗಳೂರು ದಕ್ಷಿಣ |
| 2 | ಡಾ।। ಗದ್ದಿ ಅಸೋಸಿಯೇಟ್ಸ್ | ಬೊಮ್ಮನಹಳ್ಳಿ |
| 3 | ಸರ್ವೋದಯ / ಆಸ್ತ್ರಾ ಸಂಸ್ಥೆ | ಯಲಹಂಕ |
| 4 | ಚೇತಕ್ ಅನಿಮಲ್ ವೆಲ್ಫೇರ್ ಸಂಸ್ಥೆ | ಬೆಂಗಳೂರು ಪೂರ್ವ |
| 5 | ಡಾ।। ನಂಜಪ್ಪ ಅಸೋಸಿಯೇಟ್ಸ್ | ರಾಜ ರಾಜೇಶ್ವರಿನಗರ |
| 6 | ಸುಷ್ಮಾ ಎಂಟರ್ ಪ್ರೈಸಸ್ | ಮಹದೇವಪುರ |
| 7 | ಡಾ।। ಅಭಿಲಾಶ್ ಅಸೋಸಿಯೇಟ್ಸ್ | ಬೆಂಗಳೂರು ಪಶ್ಚಿಮ |
| 8 | ಡಾ।। ಅಭಿಲಾಶ್ ಅಸೋಸಿಯೇಟ್ಸ್ | ದಾಸರಹಳ್ಳಿ |

- 2018-19ನೇ ಸಾಲಿನಲ್ಲಿ ಎ.ಬಿ.ಸಿ – ಎ.ಆರ್.ವಿ ಕಾರ್ಯಕ್ರಮದಲ್ಲಿ ಸಾಧಿಸಿದ ಪ್ರಗತಿ ವಿವರ:

| ಎ.ಆರ್.ವಿ | | | ದಯಾ ಮರಣ |
|---|---|---|---|
| ಎ.ಬಿ.ಸಿ ಸಹಿತ | ಎ.ಬಿ.ಸಿ ರಹಿತ | ಒಟ್ಟು | |
| 46151 | 70065 | 116216 | 01 |

- <u>ಎ.ಬಿ.ಸಿ-ಎ.ಆರ್.ವಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳು:</u>

1) ಶಸ್ತ್ರಚಿಕಿತ್ಸೆಗೆ ಒಳಪಡದಂತಹ ಬೀದಿನಾಯಿಗಳು ಹೆಚ್ಚಾಗಿ ಇರುವಂತಹ ವಲಯಗಳಲ್ಲಿ ನಿಯಮಿತವಾಗಿ ಎ.ಬಿ.ಸಿ ಕಾರ್ಯಕ್ರಮ ಮಾಡುವುದರ ಜೊತಯಲ್ಲಿಯೇ ಆದ್ಯತೆಯ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಎ.ಡಬ್ಲ್ಯೂ.ಓ ಅಥವಾ ಪಶುವೈದ್ಯರ ನೆರವಿನೊಂದಿಗೆ ಸಂಚಾರಿ ಶಸ್ತ್ರಚಿಕಿತ್ಸಾ ಘಟಕಗಳನ್ನು ಬಳಸಿಕೊಂಡು ಹಾಗೂ ಸಂತಾನ ಹರಣ ಶಸ್ತ್ರಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಹೆಚ್ಚಿನ ಸಂಖ್ಯೆಯ ಬೀದಿನಾಯಿಗಳಿಗೆ ಅತೀ ಕಡಿಮೆ ಅವಧಿಯಲ್ಲಿ ಎ.ಬಿ.ಸಿ ಶಸ್ತ್ರಚಿಕಿತ್ಸೆಯನ್ನು ಮಾಡಲು ಕಾರ್ಯಕ್ರಮ ರೂಪಿಸುವುದು.
2) ಹುಚ್ಚುನಾಯಿ ರೋಗಕ್ಕೆ ತುತ್ತಾದ ನಾಯಿಗಳನ್ನು ಹಿಡಿದು ತಪಾಸಣೆಗೆ ಒಳಪಡಿಸಿ, ಹುಚ್ಚುನಾಯಿ ರೋಗ ಇದೆ ಎಂದು ದೃಢಪಟ್ಟಕೂಡಲೇ ಅಂತಹ ಪ್ರದೇಶದ ಸುತ್ತಲಿನ ಬೀದಿನಾಯಿಗಳಿಗೆ ಎ.ಆರ್.ವಿ ಲಸಿಕೆಯನ್ನು ನಿಯಮಿತವಾಗಿ ಹಾಕುವುದು.
3) ಬೀದಿನಾಯಿಗಳನ್ನು ದತ್ತು ತೆಗೆದುಕೊಳ್ಳುವಂತೆ ಸಾರ್ವಜನಿಕರನ್ನು ಪ್ರೇರೇಪಿಸುವುದು.
4) ಆಹಾರ ತ್ಯಾಜ್ಯಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವಂತೆ, ಹಾಗೂ ಬೀದಿನಾಯಿಗಳಿಗೆ ಬೀದಿಗಳಲ್ಲಿ ಆಹಾರ ದೊರೆಯದಂತೆ ಮಾಡಲು ಸಾರ್ವಜನಿಕರನ್ನು ಮಾಧ್ಯಮಗಳ ಮುಖಾಂತರ ಪ್ರೇರೇಪಿಸುವುದು.
5) ಸಾಕುನಾಯಿಗಳ ಮಾಲೀಕರಿಗೆ ಅನಿಯಮಿತವಾಗಿ ನಾಯಿ ಮರಿಗಳ ಸಂತಾನೋತ್ಪತ್ತಿ ಮಾಡದಂತೆ ಮಾಧ್ಯಮಗಳ ಮೂಲಕ ಮನವರಿಕೆ ಮಾಡುವುದು.
6) ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಬೀದಿನಾಯಿಗಳೊಂದಿಗೆ ಯಾವ ರೀತಿ ವರ್ತಿಸಬೇಕು ಎಂಬುದರ ಬಗ್ಗೆ ವಿಸ್ತರಣಾ ಚಟುವಟಿಕೆಗಳ ಮೂಲಕ ತಿಳಿಯಪಡಿಸುವುದು.
7) ಸಾರ್ವಜನಿಕರು ಬೀದಿನಾಯಿಗಳಿಂದ ಕಡಿತಕ್ಕೆ ಒಳಗಾಗದೇ ಇರಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಧ್ಯಮಗಳ ಮೂಲಕ ತಿಳಿಯಪಡಿಸುವುದು.
8) ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಲಯಗಳಲ್ಲಿ ಇರುವ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಮತ್ತು ಒಳಪಡದ ಬೀದಿನಾಯಿಗಳ ಗಣತಿ ಸಮೀಕ್ಷೆ ನಡೆಸುವುದು.

- **ವಧಾಗಾರಗಳ ನಿರ್ವಹಣೆ:**

ದಿನಾಂಕ: 01.04.2009ರಿಂದ ಮೂರು ವಧಾಗಾರಗಳು ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದಿಂದ ಪಾಲಿಕೆಗೆ ಹಸ್ತಾಂತರಗೊಂಡಿರುತ್ತದೆ.

1) ನಾಗರೀಕ ವಧಾಗಾರದಲ್ಲಿ ದೊಡ್ಡ ಪ್ರಾಣಿಗಳನ್ನು ಹಾಗೂ ಸಣ್ಣ ಪ್ರಾಣಿಗಳನ್ನು, ಅಂದರೆ ಕುರಿ, ಮೇಕೆಗಳನ್ನು ಆಹಾರಕ್ಕಾಗಿ ವಧೆ ಮಾಡಿ ಸಂಸ್ಕರಿಸಲಾಗುತ್ತಿದೆ.
2) ನಾಗರೀಕ ಹಂದಿ ವಧಾಗಾರದಲ್ಲಿ ಹಂದಿಗಳನ್ನು ಆಹಾರಕ್ಕಾಗಿ ವಧೆ ಮಾಡಲಾಗುತ್ತಿದೆ.
3) ನಗರ ವಧಾಗಾರದಲ್ಲಿ ಸಣ್ಣ ಪ್ರಾಣಿಗಳು ಅಂದರೆ ಕುರಿ, ಮೇಕೆಗಳನ್ನು ಆಹಾರಕ್ಕಾಗಿ ವಧೆ ಮಾಡಿ ಸಂಸ್ಕರಿಸಲಾಗುತ್ತಿದೆ.
4) ವಧಾಗಾರಗಳಲ್ಲಿ ವಧೆಯಾಗುವ ಪ್ರಾಣಿಗಳ ಆರೋಗ್ಯ ತಪಾಸಣೆ ಹಾಗೂ ವಧೆಯ ನಂತರದ ಮುಂಡಗಳ ಗುಣಮಟ್ಟದ ಪರಿಶೀಲನೆಯನ್ನು ವಧಾಗಾರಗಳಿಗೆ ನಿಯೋಜನೆಗೊಂಡಿರುವ ಪಶುವೈದ್ಯರು ನಿರ್ವಹಿಸುತ್ತಿದ್ದಾರೆ.
5) ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕದ ಸಂಗ್ರಹಣೆಯ ಹಕ್ಕುಗಳನ್ನು ಇ-ಟೆಂಡರ್ ಮುಖಾಂತರ ಗುತ್ತಿಗೆಗೆ ನೀಡಲಾಗಿರುತ್ತದೆ.

- **ನಗರ ಮತ್ತು ನಾಗರೀಕ ವಧಾಗಾರಗಳಲ್ಲಿನ 2018-19ನೇ ಸಾಲಿನ ಪ್ರಗತಿ ವಿವರಗಳು :**

| ವಿವರ | ಎತ್ತುಗಳು | ಎಮ್ಮೆಗಳು | ಕುರಿ | ಮೇಕೆ | ಹಂದಿ |
|---|---|---|---|---|---|
| ವಧೆಗೆ ಬಂದ ಪ್ರಾಣಿಗಳ ಸಂಖ್ಯೆ | 55654 | 1271 | 381012 | 21595 | 8625 |
| ವಧಾಪೂರ್ವ ಪರೀಕ್ಷೆಯಲ್ಲಿ ತಿರಸ್ಕೃತವಾದವು | 585 | 3 | 1338 | 235 | 149 |
| ವಧೆಯಾದ ಪ್ರಾಣಿಗಳ ಸಂಖ್ಯೆ | 55069 | 1268 | 379674 | 21360 | 8476 |
| ವಧಾನಂತರ ಪಿ.ಎಂ. ಪರೀಕ್ಷೆಯಲ್ಲಿ ತಿರಸ್ಕೃತವಾದವು | 17 | 0 | 55 | 2 | 2 |
| ವಧೆಯ ನಂತರಬಟ್ಟು ಸ್ಥಿರವಾದ ಪ್ರಾಣಿಗಳ ಸಂಖ್ಯೆ | **55052** | **1268** | **379619** | **21358** | **8474** |

- ಮಾನ್ಯ ಆಯುಕ್ತರ ಆದೇಶ ಸಂಖ್ಯೆ: ಜಂ.ನಿ(ಪಪಾ)/ಪಿಆರ್/648/10-11. ದಿನಾಂಕ: 28.05.2010 ರಂತೆ ಪಶುಪಾಲನಾ ಇಲಾಖೆಯ ಅಧಿಕಾರಿಗಳಿಗೆ ಈ ಕೆಳಗಿನಂತೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ಆದೇಶ ಹೊರಡಿಸಲಾಗಿರುತ್ತದೆ.

1) ಮಾಂಸದ ಅಂಗಡಿ ಹಾಗೂ ಕೋಳಿ, ಮೀನು, ಹಂದಿ ಮಾಂಸದ ಅಂಗಡಿಗಳ ಪರವಾನಗಿ ನೀಡುವುದು, ನವೀಕರಿಸುವುದು, ಶುಚಿತ್ವದ ಪರಿಶೀಲನೆ, ಅನಧಿಕೃತ ಪ್ರಾಣವಧೆ ನಿರ್ಬಂಧಿಸುವುದು,
2) ಸಾಕು ನಾಯಿಗಳಿಗೆ ಹಾಗೂ ಕೆನಲ್‌ಗಳಿಗೆ ಪರವಾನಗಿ ನೀಡುವುದು ಹಾಗೂ ನವೀಕರಿಸುವುದು.
3) ಬೀದಿ ದನಗಳ ನಿಯಂತ್ರಣ ಹಾಗೂ ದನಗಳ ದೊಡ್ಡಿ ನಿರ್ವಹಣೆ.